**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 184/2022**
**ಸಿ.ಡಬ್ಲ್ಯೂ–2**
**ಪಿ.ಡಬ್ಲೂ –2**

ಸಾಕ್ಷಿದಾರರ ಹೆಸರು : ಪ್ರಶಾಂತ್ ಕಾಂಬ್ಳಿ

ತಂದೆಯ ಹೆಸರು : ಲಕ್ಷ್ಮಣ್

ವಯಸ್ಸು : 32 ವರ್ಷ

ಉದ್ಯೋಗ : ಅಬಕಾರಿ ಕಚೇರಿಯಲ್ಲಿ ಪೇದೆ.

ವಾಸ : ಬೆಳಗಾವಿ

ದಿನಾಂಕ : 10–09–2024.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈ ಪ್ರಕರಣದ ಸಮಯದಲ್ಲಿ ನಾನು ದಿನಾಂಕ 04–10–2019 ರಿಂದ ಇಲ್ಲಿಯವರೇಗೆ ಪುತ್ತೂರು ಉಪವಿಭಾಗ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01–05–2021 ರಂದು ಅಬಕಾರಿ ಉಪ ಅಧೀಕ್ಷಕರ ಕಚೇರಿ, ಪುತ್ತೂರು ವಿಭಾಗಕ್ಕೆ ಬಂದ ದೂರವಾಣಿ ಮಾಹಿತಿಯಂತೆ ಆರೋಪಿಯಾದ ವಿಶ್ವನಾಥ ಗೌಡ , ತಂದೆಃ ಕೂಸಪ್ಪ ಗೌಡ , ಕಾಯರ್ದೋಡಿ ಮನೆ, ಮಂಡೆಕೋಲು ಗ್ರಾಮ ಸುಳ್ಯ ತಾಲೂಕು ರವರ ಮನೆಯಲ್ಲಿ ಗೇರು ಹಣ್ಣಿನ ಕೊಳೆರಸ, ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದಾರೆಂದು ಬಂದ ಖಚಿತ ಮಾಹಿತಿ ಮೇರೆಗೆ, ದಿನಾಂಕ 01–05–2021 ರಂದು ಬೆಳಗ್ಗೆ 7.00 ಗಂಟೆಗೆ ಚಾ.ಸಾ.1 ರವರು , ಚಾ.ಸಾ.3 ರಿಂದ 5 ರವರು ಹಾಗೂ ನಾನು ನಮ್ಮ ಇಲಾಖಾ ವಾಹನ ನಂಬ್ರ ಕೆಎ–19–ಜಿ–0715 ರಲ್ಲಿ ನಮ್ಮ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಪುತ್ತೂರು ಕಚೇರಿಯಿಂದ ಕುಂಬ್ರ-ಜಾಲ್ಸೂರು ಮಾರ್ಗವಾಗಿ ಅಡ್ಕಾರು ಎಂಬಲ್ಲಿ ಬಲಕ್ಕೆ ತಿರುಗಿ, ಬೈತಡ್ಕ ಮಾರ್ಗವಾಗಿ, ಸುಳ್ಯ-ಮಂಡೆಕೋಲು-ಅಜ್ಜಾವರ ರಸ್ತೆಯಲ್ಲಿ ಸಾಗಿ , ಮಂಡೆಕೋಲು ಪೇಟೆಯಿಂದ 2 ಕಿಲೋ ಮೀಟರು ಮುಂದೆ ಸಾಗಿ , ಅಲ್ಲಿಂದ ಬಲಕ್ಕೆ ತಿರುಗಿ, 150 ಮೀಟರು ದೂರ ಸಾಗಿದಾಗ, ಅಲ್ಲಿ ಧರ್ಮದೈವಸ್ಥಾನ ಕಂಡು ಬಂದಿರುತ್ತದೆ. ಸದರಿ ಸ್ಥಳದಲ್ಲಿ ನಮ್ಮ ಇಲಾಖಾ ವಾಹನವನ್ನು ನಿಲ್ಲಿಸಿ, ಕಾಲ್ನಡಿಗೆಯಿಂದ ಧರ್ಮದೈವಸ್ಥಾನದ ಹಿಂದುಗಡೆ ಇರುವ ಮನೆಗೆ ನಾವು ಹೋಗುತ್ತಿರುವಾಗ, ಸದರಿ ಮನೆಯ ಮುಂದೆ ವ್ಯಕ್ತಿಯೋರ್ವರು ನಿಂತಿದ್ದು , ಅವರು ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು , ಮನೆಯ ಅಂಗಳದ ಮುಂದಿರುವ ಅಡಿಕೆ ತೋಟಕ್ಕೆ ಓಡಿ ಹೋಗಲು ಪ್ರಾರಂಭಿಸಿರುತ್ತಾರೆ. ನಂತರ ಓಡಿ ಹೋದ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದರೂ ನಮಗೆ ಸಿಗದೇ ತಪ್ಪಿಸಿಕೊಂಡಿರುತ್ತಾರೆ. ನಂತರ ಮನೆಯ ಬಳಿ ಹಿಂತಿರುಗಿ ಬಂದಾಗ, ಮನೆಯೊಳಗಿನಿಂದ ಒಬ್ಬ ಮಹಿಳೆಯು ಮನೆಯ ಹೊರಗಡೆ ಬಂದಿದ್ದು , ಅವರಲ್ಲಿ ಸದರಿ ಓಡಿ ಹೋದ ವ್ಯಕ್ತಿಯು ಯಾರೆಂದು ಕೇಳಿದಾಗ, ಸದರಿ ಮಹಿಳೆಯು ಓಡಿ ಹೋದ ವ್ಯಕ್ತಿಯು ತನ್ನ ಪತಿಯಾಗಿದ್ದು ವಿಶ್ವನಾಥ ಗೌಡ ಎಂದು ಹೇಳಿದ್ದು ಅವರು ಈ ಪ್ರಕರಣದ ಆರೋಪಿಯಾಗಿರುತ್ತಾರೆ.

ಮಾಹಿತಿ ಬಂದ ಸ್ಥಳವನ್ನು ಖಚಿತಪಡಿಸಿಕೊಂಡು ಮನೆಯನ್ನು ಶೋಧನೆ ನಡೆಸಲು ಪಂಚರಾಗಿ ಯಾರಾದರೂ ಸಹಕರಿಸುವರೇ ಎಂದು ಅಕ್ಕಪಕ್ಕದವರನ್ನು ವಿಚಾರಿಸಿದಾಗ, ಯಾರೂ ಸಹ ಪಂಚರಾಗಲು ಸಹಕರಿಸಿರುವುದಿಲ್ಲ. ಮಾನ್ಯ

ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ ಆಧಾರವನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ, ಅಧಿಕಾರಿಗಳು ತಕ್ಷೀರು ಸ್ಥಳದಲ್ಲಿ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ, ನಮ್ಮನ್ನು ಪಂಚರನ್ನಾಗಿಸಿಕೊಂಡು ಸದರಿ ಮನೆಯನ್ನು ಶೋಧನೆ ಮಾಡಲು ಪ್ರಾರಂಭಿಸಿ, ಸದರಿ ಮಹಿಳೆಯ ಅನುಮತಿ ಮೇರೆಗೆ , ಸದರಿ ಮನೆಯ ಒಳಗಡೆ ಪ್ರವೇಶಿಸಿದಾಗ. ಶೋಧನೆ ಮಾಡಿದಾಗ, ಅಲ್ಲಿ ಯಾವುದೇ ಅಕ್ರಮ ಸ್ವತ್ತುಗಳು ಪತ್ತೆಯಾಗಿರುವುದಿಲ್ಲ.

ಮನೆಯ ಹೊರಗಡೆ ಬಂದು ಮನೆಯ ಎಡಭಾಗದಲ್ಲಿ ಹಂಚಿನ ಛಾವಣಿಯ ಒಂದು ಶೆಡ್ ಕಂಡು ಬಂದಿದ್ದು, ಅದರೊಳಗಡೆ ಶೋಧನೆ ನಡೆಸಿದಾಗ, ಒಣಗಿದ ತರಗೆಲೆಗಳ ರಾಶಿಯೊಳಗಡೆ ಹುಡುಕಿದಾಗ, ಸುಮಾರು 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಒಂದು ಪ್ಲಾಸ್ಟಿಕ್ ಡ್ರಂ ,10 ಲೀಟರ್ ಸಾಮಾರ್ಥ್ಯದ ಬಿಳಿ ಬಣ್ಣದ ಒಂದು ಪ್ಲಾಸ್ಟಿಕ್ ಡಬ್ಬ ಕಂಡು ಬಂದಿದ್ದು, ಅವುಗಳನ್ನು ತೆರೆದು ನೋಡಿದಾಗ, ಅವುಗಳಲ್ಲಿ ಗೇರು ಹಣ್ಣಿನ ಕೊಳೆ ರಸ ಇರುವುದು ಕಂಡು ಬಂದಿರುತ್ತದೆ.

ಅಲ್ಲೇ ಪಕ್ಕದಲ್ಲಿ ತೆಂಗಿನ ಗರಿಗಳ ಕಟ್ಟು ಇಟ್ಟಿರುವ ಸ್ಥಳ ಹಾಗೂ ಒಣಗಿದ ತರಗೆಲೆಗಳ ರಾಶಿಗಳ ಮಧ್ಯದಲ್ಲಿ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಗೇರು ಹಣ್ಣಿನ ಕಳ್ಳಭಟ್ಟಿ ಸಾರಾಯಿ ಕಂಡು ಬಂದಿರುತ್ತದೆ. ಸದರಿ ಬಾಟಲಿಯ ಮುಚ್ಚಳವನ್ನು ತೆರೆದು ನೋಡಿದಾಗ, ಅದು ಘಾಟು ವಾಸನೆಯಿಂದ

ಕೂಡಿರುವುದರಿಂದ ಅದು ಗೇರು ಹಣ್ಣಿನ ಕಳ್ಳಭಟ್ಟಿ ಸಾರಾಯಿ ಎಂದು ಗುರುತಿಸಲಾಯಿತು.

ನಂತರ ದೊರೆತ ಮುದ್ದೆ ಮಾಲುಗಳಿಂದ 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಒಂದು ಪ್ಲಾಸ್ಟಿಕ್ ಡ್ರಂನಿಂದ ಒಂದು ಲೀಟರ್ ನಷ್ಟು ಗೇರು ಹಣ್ಣಿನ ಕೊಳೆ ರಸ, 10 ಲೀಟರ್ ಸಾಮಾರ್ಥ್ಯದ ಬಿಳಿ ಬಣ್ಣದ ಪ್ಲಾಸ್ಟಿಕ್ ಡಬ್ಬದಿಂದ ಒಂದು ಲೀಟರ್ ನಷ್ಟು ಗೇರು ಹಣ್ಣಿನ ಕೊಳೆ ರಸವನ್ನು, ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಲಾಯಿತು. ನಂತರ ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಇಲಾಖಾ ಮೊಹರಿನಿಂದ ಮೊಹರನ್ನು ಹಾಕಲಾಯಿತು. ಮಾದರಿ ಮೊಹರನ್ನು ತಯಾರಿಸಿ, ಅದಕ್ಕೆ ಗುರುತಿನ ಚೀಟಿಯನ್ನು ಅಂಟಿಸಲಾಯಿತು.

ಉಳಿದ ಗೇರು ಹಣ್ಣಿನ ಕೊಳೆ ರಸವನ್ನು ಸ್ಥಳದಲ್ಲಿ ಚೆಲ್ಲಿ ನಾಶಪಡಿಸಿರುತ್ತೇವೆ. ನಂತರ ಮುದ್ದೆ ಮಾಲನ್ನು ಮಹಜರು ಮೂಲಕ ಇಲಾಖಾ ವಶಕ್ಕೆ ಪಡೆದು, ಮುಂದಿನ ಕ್ರಮಕ್ಕಾಗಿ ಕಚೇರಿಗೆ ತಂದಿರುತ್ತೇವೆ.

ನಾನು ಈಗ ನ್ಯಾಯಾಲಯದಲ್ಲಿ ಮು.ಮಾ.1 ರಿಂದ 4 ನ್ನು ನೋಡಿ ಗುರುತಿಸಿದ್ದು, ಅದಕ್ಕೆ ಅಂಟಿಸಿರುವ ಚೀಟಿಯಲ್ಲಿ ನನ್ನ ಹಾಗೂ ಚಾ.ಸಾ.1 ಹಾಗೂ ಉಳಿದ ಸಿಬ್ಬಂದಿಗಳ ಸಹಿಗಳು ಇರುತ್ತದೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾನು ಈಗ ನ್ಯಾಯಾಲಯದಲ್ಲಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಗೇರು ಹಣ್ಣಿನ ಕೊಳೆ ರಸವಿದ್ದ ಒಂದು ಪ್ಲಾಸ್ಟಿಕ್ ಡ್ರಮ್ ಹಾಗೂ ಪ್ಲಾಸ್ಟಿಕ್ ಡಬ್ಬವನ್ನು ನಮ್ಮ ಇಲಾಖಾ ವಶಕ್ಕೆ ಪಡೆದಿರುತ್ತೇವೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ತಕ್ಷೀರು ಸ್ಥಳದಿಂದ ಓಡಿ ಹೋದ ಆರೋಪಿಯು ಈಗ ನ್ಯಾಯಾಲಯದ ಮುಂದೆ ಹಾಜರಿದ್ದು, ಅವರನ್ನು ನಾನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ.ವಿ.ಜಿ. ವಕೀಲರಿಂದಃ**

ನಮ್ಮ ಪುತ್ತೂರಿನ ಕಚೇರಿಯಿಂದ ತಕ್ಷೀರು ಸ್ಥಳಕ್ಕೆ ಸುಮಾರು 36-37 ಕಿಲೋ ಮೀಟರು ದೂರವಿರುತ್ತದೆ. ತಕ್ಷೀರು ಸ್ಥಳಕ್ಕೆ ನಮ್ಮ ಕಚೇರಿಯಿಂದ ಬೆಳಗ್ಗೆ 7.00 ಗಂಟೆಗೆ ಹೊರಟಿರುತ್ತೇವೆ. ನಮ್ಮ ಕಚೇರಿಯಿಂದ ಹೊರಡುವಾಗ ಪ್ರಸ್ತುತ ಪ್ರಕರಣದಲ್ಲಿ ಸಹಕರಿಸುವಂತೆ ಪಂಚರನ್ನು ಕರೆದುಕೊಂಡು ಬರಲು ಪ್ರಯತ್ನ ಮಾಡಿರುವುದಿಲ್ಲ. ನಾನು ಹೇಳುವಂತಹ ತಕ್ಷೀರು ಸ್ಥಳದ ಪರಿಚಯ ನನಗೆ ಈ ಮೊದಲು ಇದ್ದಿರಲಿಲ್ಲ. ಈ ಹಿಂದೆ ನನಗೆ ಆರೋಪಿಯ ಪರಿಚಯ ಇದ್ದಿರಲಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಮನೆಯನ್ನು ಯಾರು ನನಗೆ ತೋರಿಸಿಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನಮಗೆ ಖಚಿತ ಮಾಹಿತಿ

ಬಂದ ಮೇರೆಗೆ ನಾವು ತಕ್ಷೀರು ಸ್ಥಳದ ಮನೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಮನೆಯವರೆಗೂ ವಾಹನಗಳು ಹೋಗುವುದಿಲ್ಲ. ನಾವೆಲ್ಲರೂ ಸಮವಸ್ತ್ರದಲ್ಲಿ ಇದ್ದು , ಒಟ್ಟು ನಾವು 5 ಮಂದಿ ಇದ್ದೆವು. ನಾವು 5 ಮಂದಿ ಇದ್ದರೂ ಸಹ ಓಡಿ ಹೋದ ಆರೋಪಿಯನ್ನು ಹಿಡಿಯಲು ಸಾಧ್ಯವಾಗಲಿಲ್ಲ ಎಂದರೆ ಸಾಕ್ಷಿಯು ನಾವು ಮನೆಗೆ ಹೋಗುವಷ್ಟರಲ್ಲಿಯೇ ಆರೋಪಿಯು ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ನಾವು ಹೋದ ತಕ್ಷೀರು ಮನೆಯು ಹಂಚು ಛಾವಣಿಯದ್ದಾಗಿರುತ್ತದೆ. ಸದರಿ ಮನೆಯ ನಂಬ್ರವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಮನೆಗೆ ಮನೆ ನಂಬ್ರ ಇದ್ದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ಸೇರಿ ಅಲ್ಲಿ ಎಷ್ಟು ಕಟ್ಟಡ ಇತ್ತು ಎಂದರೆ ಸಾಕ್ಷಿಯು ಮನೆಯನ್ನು ಸೇರಿ ಒಂದು ಶೆಡ್ ಇತ್ತು ಎಂದು ನುಡಿಯುತ್ತಾರೆ. ಮನೆಯಲ್ಲಿ ಎರಡು ಕೋಣೆಗಳು ಇದ್ದವು.

ಸದರಿ ಮನೆಯಲ್ಲಿ ಆರೋಪಿಯ ಪತ್ನಿ ಹಾಗೂ ಮಕ್ಕಳು ಇದ್ದರು. ತಕ್ಷೀರು ದಿನದಂದು ತಕ್ಷೀರು ಸ್ಥಳದಿಂದ ಓಡಿ ಹೋದ ಆರೋಪಿಯು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ನನಗೆ ಈಗ ನೆನಪಿರುವುದಿಲ್ಲ. ಮನೆಯ ಮುಂಭಾಗದಲ್ಲಿ ಗೇಟು ಇದ್ದಿರಲಿಲ್ಲ.

ಸದರಿ ಮನೆಯ ಅಕ್ಕ-ಪಕ್ಕ ಬೇರೆ ಮನೆಗಳು ಇದ್ದವು. ಸದರಿ ಅಕ್ಕ-ಪಕ್ಕದ ಮನೆಯವರನ್ನು ಪಂಚರಾಗಿ ಸಹಕರಿಸಲು ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ನಾವು

ಅವರನ್ನು ವಿಚಾರಿಸಿದ್ದರೂ ಅವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಸದರಿ ಮನೆಗೆ ಹೋದ ನಂತರ ಅಕ್ಕ-ಪಕ್ಕದ ಮನೆಯವರು ನಾವು ಹೋದ ಮನೆಗೆ ಬಂದಿರುವುದಿಲ್ಲ.

ತಕ್ಷೀರು ನಡೆಯಿತು ಎನ್ನಲಾದ ಸಮಯವು ಕೊರೋನಾ ಕಾಲವಾಗಿತ್ತು ಎಂದರೆ ಸರಿ. ನಾವು ಹೋದ ಶೆಡ್ ಗೆ ಪ್ರತ್ಯೇಕ ನಂಬ್ರ ಇದ್ದಿರಲಿಲ್ಲ. ಸದರಿ ಶೆಡ್‌ನಲ್ಲಿ ಕೋಣೆಗಳು ಇದ್ದಿರಲಿಲ್ಲ. ಸಾಕ್ಷಿ ಮುಂದುವರೆದು ಅದು ಒಂದು ಕೊಠಡಿಯ ಶೆಡ್ ಆಗಿತ್ತು ಎಂದು ನುಡಿಯುತ್ತಾರೆ.

ಸದರಿ ಶೆಡ್ ನೊಳಗೆ ಕೃಷಿ ಉತ್ಪನ್ನಗಳನ್ನು ದಾಸ್ತಾನು ಇರಿಸಲಾಗಿತ್ತಾ ಎಂದರೆ ಸಾಕ್ಷಿಯು ಕೃಷಿ ಉತ್ಪನ್ನಗಳನ್ನು ದಾಸ್ತಾನು ಇರಲಿಲ್ಲ ಬದಲಾಗಿ ತೆಂಗಿನ ಗರಿಗಳ ಕಟ್ಟು ಇತ್ತು ಎಂದು ನುಡಿಯುತ್ತಾರೆ.

ಕಳ್ಳಭಟ್ಟಿ ಸಾರಾಯಿಯ ತಯಾರಿಕೆಗೆ ಏನೆಲ್ಲಾ ಸಾಮಾಗ್ರಿಗಳು ಬೇಕು ಎಂದು ತಿಳಿದಿದೆಯಾ ಎಂದರೆ ಸಾಕ್ಷಿಯು ತಿಳಿದಿದೆ ಎಂದು ನುಡಿಯುತ್ತಾರೆ. ಸದರಿ ಶೆಡ್ ನಲ್ಲಿ ಕಳ್ಳಭಟ್ಟಿ ಸಾರಾಯಿಯ ತಯಾರಿಕೆಗೆ ಬೇಕಾದ ಉಪಕರಣಗಳು ಇರಲಿಲ್ಲ. ಆ ಕಾರಣದಿಂದ ಸದರಿ ಶೆಡ್‌ನಿಂದ ನಮಗೆ ದೊರೆತಿದೆ ಎಂದು ಹೇಳಲಾದ ಕಳ್ಳಭಟ್ಟಿ ಸಾರಾಯಿಯ ದ್ರಾವಣವನ್ನು ಎಲ್ಲಿ ತಯಾರಿಸಲಾಗಿದೆ ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಗೇರು ಹಣ್ಣನ್ನು ಒಂದು ಪಾತ್ರೆಯಲ್ಲಿ ಶೇಖರಿಸಿಟ್ಟರೆ ಅದರಿಂದ ನೀರು ಶೇಖರಣೆಗೊಳ್ಳುತ್ತದೆ ಎಂದರೆ ಸಾಕ್ಷಿಯು ಅಷ್ಟು ಪ್ರಮಾಣದಲ್ಲಿ ಗೇರು ಹಣ್ಣಿನ ನೀರು ಶೇಖರಣೆಯಾಗುವುದಿಲ್ಲ ಎಂದು ನುಡಿಯುತ್ತಾರೆ. ಸ್ವಾಭಾವಿಕವಾಗಿ ಗೇರು ಹಣ್ಣನ್ನು ಹಾಗೆಯೇ ಬಿಟ್ಟರೆ ಅದು ಕೊಳೆತು ಕಳ್ಳಭಟ್ಟಿ ಸಾರಾಯಿಯಾಗಿ ಪರಿವರ್ತನೆಯಾಗುತ್ತದೆ ಎಂದರೆ ಸರಿ.

ಆರೋಪಿಯ ಮನೆಗೆ ಹೋಗುವ ಪೂರ್ವದಲ್ಲಿ ಆರೋಪಿಯು ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದರಾ ಎಂದು ನಾವು ಯಾರನ್ನೂ ವಿಚಾರಿಸಿರುವುದಿಲ್ಲ. ಮುದ್ದೆ ಮಾಲು 1 ರಿಂದ 4 ಮಿನರಲ್ ನೀರಿನ ಪ್ಲಾಸ್ಟಿಕ್ ಬಾಟಲ್‌ಗಳು ಎಂದರೆ ಸರಿ.

ಮಹಜರನ್ನು ನಾನೇ ಬರೆದಿರುತ್ತೇನೆ. ಮುದ್ದೆ ಮಾಲುಗಳಿಗೆ ಅಂಟಿಸಿದ ಚೀಟಿಗಳನ್ನು ನಾನು ತಕ್ಷೀರು ಸ್ಥಳದಲ್ಲಿಯೇ ಬರೆದಿರುತ್ತೇನೆ.

ಪ್ಲಾಸ್ಟಿಕ್ ಬಾಟಲಿಗಳಲ್ಲಿ ತುಂಬಿಸಿಟ್ಟ ಗೇರು ಹಣ್ಣಿನ ಕೊಳೆ ರಸವನ್ನು ಒಂದು ತಿಂಗಳೊಳಗಾಗಿ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇವೆ. ಗೇರು ಹಣ್ಣಿನ ಕೊಳೆ ರಸವನ್ನು ಹಾಗೆ ತುಂಬಿಸಿಟ್ಟರೆ ದಿನಗಳು ಕಳೆದ ಹಾಗೆ ಅದರ ಮದ್ಯದ ಅಂಶವು ಕ್ರಮೇಣ ಜಾಸ್ತಿಯಾಗುತ್ತಾ ಹೋಗುತ್ತದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತೆ ಮಾದರಿಗಾಗಿ ತೆಗೆದಿಟ್ಟ ಗೇರು ಹಣ್ಣಿನ ಕೊಳೆ ರಸವನ್ನು ತೆಗೆದಿಟ್ಟು , ಉಳಿದ ಗೇರು ಹಣ್ಣಿನ ಕೊಳೆ ರಸವನ್ನು

ನಾಶಪಡಿಸುವ ಪೂರ್ವದಲ್ಲಿ ನಾನು ನನ್ನ ಮೇಲಧಿಕಾರಿಯವರ ಅನುಮತಿ ಪಡೆಯಬೇಕು ಎಂದರೆ ಸರಿ.

ತಕ್ಷೀರು ಸ್ಥಳದಲ್ಲಿ ದೊರೆತ ಪ್ಲಾಸ್ಟಿಕ್ ಡ್ರಮ್ ಮತ್ತು ಕ್ಯಾನ್ ಈಗ ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ.

ತಕ್ಷೀರು ಸ್ಥಳದಿಂದ ನಾವು ಸುಳ್ಯದ ಅಬಕಾರಿ ಕಚೇರಿಗೆ ಹೋಗಿ, ಅಲ್ಲಿ ನಾವು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇವೆ. ಸರ್ಚ್ ವಾರಂಟನ್ನು ಚಾ.ಸಾ.1 ರವರು ಬರೆದಿರುತ್ತಾರೆ.

ನಾವು ಹೋದ ತಕ್ಷೀರಿನ ಮನೆಯ ಮಾಲೀಕರಿಗೆ ತೋಟ,ಗದ್ದೆ ಇದೆಯಾ ಎಂದು ನಾವು ನೋಡಿದ್ದೂ ಇಲ್ಲ , ವಿಚಾರಿಸಿದ್ದೂ ಇಲ್ಲ. ನಾನು ಹಾಗೂ ನಮ್ಮ ಸಿಬ್ಬಂದಿಗಳು ತಕ್ಷೀರು ಸ್ಥಳಕ್ಕೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ನಾವು ತಕ್ಷೀರು ಸ್ಥಳವನ್ನು ಶೋಧನೆ ಮಾಡಿದ್ದೂ ಇಲ್ಲ , ತಕ್ಷೀರು ಸ್ಥಳದಲ್ಲಿ ಯಾವುದೇ ಸ್ವತ್ತುಗಳು ಸಿಗಲಿಲ್ಲ , ನಾನು ಯಾವುದೇ ಮಹಜರನ್ನು ತಯಾರಿಸಿಯೂ ಇಲ್ಲ ಎಂದರೆ ಸರಿಯಲ್ಲ. ನಾನು ಮಹಜರನ್ನು ನಮ್ಮ ಕಚೇರಿಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಮಗೆ ಯಾರೂ ಪಂಚರಾಗಿ ಸಿಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ದಾಸ್ತಾನು ಇಟ್ಟಂತಹ ಸ್ವತ್ತನ್ನು ಪ್ರಸ್ತುತ ಪ್ರಕರಣಕ್ಕಾಗಿ ಹೊಂದಿಸಿಕೊಂಡು, ಚಾ.ಸಾ.1 ರವರು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾನು ಹೇಳಿದ ಆರೋಪಿಗೆ ಓಡಿ ಹೋಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ತಕ್ಷೀರು ನಡೆಯಿತು ಎನ್ನಲಾದ ಸಮಯವು ಕೊರೋನಾ ಕಾಲವಾದ್ದರಿಂದ ನಮ್ಮ ಇಲಾಖಾ ಅಂಕಿ–ಅಂಶ ಭರ್ತಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿಕೊಂಡು , ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ತಕ್ಷೀರಿನ ಸ್ಥಳದ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ.

ಪೊಲೀಸರು ನನ್ನ ಹೇಳಿಕೆಯನ್ನು ತಕ್ಷೀರು ನಡೆಯಿತು ಎನ್ನಲಾದ ದಿನದಂದು ಪುತ್ತೂರಿನಲ್ಲಿ ಪಡೆದುಕೊಂಡಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿದ್ದಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಧಿಕಾರಿಯವರು ಆರೋಪಿಯ ವಿರುದ್ಧ ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ ,ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ